ವಿದ್ಯಾಭ್ಯಾಸದ ಇಲಾಖೆ.

ಸ್ಯ 1890ನೇ ಇಸವಿ ಸೆಪ್ಟಂಬರ್ ತಾರೀಖು 3.

ಇದರಡೀಕಂಡ ಪುಸ್ತಕಗಳು ಈ ಕೆಳಗೆ ವಿವರಿಸಲ್ಪಟ್ಟಿರುವ ಪ್ರಕಾರ ಉಪಯೋಗಿಸಲು ಯೋಗ್ಯವೆಂದು ಎಣಿಸಲ್ಪಟ್ಟಿವೆ.

ಪುಸ್ತಕದ ಹೆಸರು.	ಗ್ರಂಥಕರ್ತ ಅಥವಾ ಫಾಯಿಷ್ ಮಾಡುವವರ ಹೆಸರು.	ಮಾರಲ್ಪಡುವ ಸ್ಥಳ.	ಕ್ರಯ.	ಯಾವ ರೀತಿಯಿಂದ ಉಪಯೋಗಿಸಲು ಯೋಗ್ಯವಾಗಿವೆ.
ತೆಲುಗು ಅಟ್ಲಾಸ್	ವ ಎಸ್ ಸ್ಕೂಲ್ ಬುಕ್ಕ್ ಮತ್ತು ವರ್ನಾಕ್ಯುಲರ್ ಸೊಸೈಟಿ	ಬೆಂಗಳೂರು ಸೆಂಟ್ರಲ್ ಬುಕ್ಕ್ ಡಿಪೊ	ರೂ. ಆ. ಪೈ. 0—12—0	ದೇಶಭಾಷಾ ಪಾಠಶಾಲೆಗಳಲ್ಲಿಯೂ ಮತ್ತು ಮೈಸೂರು ದೇಶೀ ಪರೀಕ್ಷೆಗಳಿಗೂ ಗ್ರಂಥವಾಗಿ ಉಪಯೋಗಿಸಲು ಯೋಗ್ಯವಾಗಿದೆ
ಜ್ಯೋಗರಫಿಜಯರ್ಯಾ ಅಂದರೆ ಹಿಂದುಸ್ತಾನಿ ಭೂಗೋಳ ಶಾಸ್ತ್ರ ..	ಅಬ್ದುಲ್‌ಹೆಯವರು	ಡಿಟೋ	0—6—0	ಡಿಟೋ
ರಾವುವರ್ಮ ಲೀಲಾವತೀ ಚರಿತ್ರೆ ..	ಎ. ಆನಂದರಾಯರವರು	ಬೆಂಗಳೂರು ಸೆಂಟ್ರಲ್ ಬುಕ್ಕ್ ಡಿಪೋ ಮತ್ತು ಗ್ಯಾರ್ಜ್ ಎಟ್ಸ್ ಅಸೋಸಿಯೇಷ್ಯ್ ಮೈಸೂರು	0—12—0	ದೇಶಭಾಷಾ ಪಾಠಶಾಲೆಗಳಲ್ಲಿ ಇನಾಮು ಪುಸ್ತಕಗಳಾಗಿ ಉಪಯೋಗಿಸಲು ಯೋಗ್ಯವಾಗಿದೆ
ಪಾಂಚಾಲೀ ಪರಿಣಯ	ಡಿಟೋ	ಡಿಟೋ	0—10—0	ಡಿಟೋ
ಪೋರ್ ಇಯರ್ಸ್ ಇನ್ ಆರ್ಕ್ ಇಂಗ್ಲಿಷ್ ಯೂನಿವರ್ಸಿಟಿ ಅಂದರೆ, ಇಂಗ್ಲಾಂಡಿನಲ್ಲಿ ಯೂನಿವರ್ಸಿಟಿಯಲ್ಲಿ ನಾಲ್ಕು ವರ್ಷ ಇರೋಣ	ಎಸ್. ಸತ್ಯನಾರ್ಥ ಎಂ. ಎ. ಎಲ್., ಎಲ್. ಬಿ. ಯವರು	ಸೆಂಟ್ರಲ್ ಬುಕ್ಕ್ ಡಿಪೊ ಬೆಂಗಳೂರು	1—2—0	ಇಂಗ್ಲಿಷ್ ಕಾಲೀಜ್ ಮತ್ತು ಸ್ಕೂಲ್‌ಗಳಲ್ಲಿ ಇನಾಮು ಪುಸ್ತಕಗಳಾಗಿ ಕೊಡಲು ಯೋಗ್ಯವಾಗಿದೆ
ನಕ್ಷೆಪ್ಸ್ ಇನ್‌ಪ್ರೊಜೆಕ್ಷನ್ ಮತ್ತು ಅವೆಪ್ಲಿಕೇಷನ್ ಮತ್ತು ಪರೀಕ್ಷಾ ಪ್ರಶ್ನೆಗಳು ಸಹಿತ	ಜಾರ್ಜ್ ಆಡಂಸಾಹೇಬ್ ಎಂ. ಎ. ಯವರು	ಡಬ್ಲ್ಯು. ಎಸ್. ಸ್ಯಾಕ್ಷೆಟ್ 117 ಆರ್ಮಿನಿಯರ್ ಬೀದಿ ಮದ್ರಾಸ್	0—0—3 32 ಮ್ಯಾಪುಗಳುಳ್ಳ ಬಂದು ಕಟ್ಟಿಗೆ 8 ಆಣೆಗಳು	ಇಂಗ್ಲಿಷ್ ಮಿಡಲ್ ಮತ್ತು ಹೈಸ್ಕೂಲುಗಳಲ್ಲಿ ಉಪಯೋಗಿಸಲು ಯೋಗ್ಯವಾಗಿದೆ.

ಕೆಲವು ಗ್ರಂಥಕರ್ತರು ತಮ್ಮ ಪುಸ್ತಕಗಳನ್ನ ಸರ್ಕಾರಿ ಮತ್ತು ಇತರ ಪಾಠಶಾಲೆಗಳಲ್ಲಿ ಉಪಯೋಗಿಸಲು ಯೋಗ್ಯವಾಗಿವೆ ಎಂದು ತಮ್ಮ ಪುಸ್ತಕಗಳ ಪೀಠಿಕೆಗಳಲ್ಲಿ ಸರ್ಕಾರದಿಂದ ಅಧಿಕಾರವನ್ನು ಪಡೆಯದೆ ಅಧಿಕಾರವನ್ನು ಹೊಂದಿದಂತೆಯೇ ಛಾಪಿಸಿರುತ್ತಾರೆ. ಆದ್ದರಿಂದ ಸಕಲಜನಗಳಿಗು ಇದರಿಂದ ತಿಳಿಯಪಡಿಸುವದೇನಂದರೆ ಮೇಲ್ಕಂಡಂತೆ ಸರ್ಕಾರೀ ಗೆಜೆಟ್ಟಿನಲ್ಲಿ ಇಸ್ತಿಹಾರ್ ನಾಮೆ ಮೂಲಕ ಫಾಯಿಷ್ ಮಾಡದೆಯಿರುವ ಯಾವ ಪುಸ್ತಕವನ್ನಾದರು ಸ್ಕೂಲ್‌ಗಳಲ್ಲಿ ಉಪಯೋಗಿಸಲು ಯೋಗ್ಯವಾದದ್ದೆಂದು ತಿಳಿಯಕೂಡದು.

ಹೆಚ್. ಜಿ. ಛಾಪ್ಮನ್, ಎಂ. ಎ.
ಎಡ್ಯುಕೇಷನ್ ಸೆಕ್ರಿಟರಿ.

ಬೆಂಗಳೂರು ಡಿಸ್ಟ್ರಿಕ್ಟ್.

ಬೆಂಗಳೂರು ಸಬ್ ಜಡ್ಜ್‌ರವರ ಕೋರ್ಟಿನಲ್ಲಿ.

1890ನೇ ಇಸವಿ ಅರ್ಜೀ ನಂಬರು 693.

ದೊಡ್ಡಬಳ್ಳಾಪುರದ ಕಸಬೇಲಿ ಇದ್ದ ಮೃತಪಟ್ಟ ವಾಸುದೇವಮೂರ್ತಿ ಆಸ್ತೀ ವಿಷಯದಲ್ಲಿ—

ಅರ್ಜೀದಾರ ರಾಮಚಂದ್ರಯ್ಯ ಮೈನರ್ ಗಾರ್ಡಿಯರ್ ಅಕ್ಕಮ್ಮ ಮೃತಪಟ್ಟ ಸದರೀ ವಾಸುದೇವಮೂರ್ತಿಗೆ ಮೈನರನು ತಮ್ಮ ಆಗಬೇಕೆಂಬ ಹಕ್ಕುದಾರಿ ಮೇಲೆ ದೊಡ್ಡಬಳ್ಳಾಪುರ ಸ್ಥಳದ ಮೈನರ್ ರಾಮಚಂದ್ರಯ್ಯನ ಗಾರ್ಡಿಯರ್ ಅಕ್ಕಮ್ಮ ದೊಡ್ಡಬಳ್ಳಾಪುರ ವಾಸಸ್ಥರಾಗಿ ಮೃತಪಟ್ಟ ವಾಸುದೇವಮೂರ್ತಿ ಬೆಂದಗಿ ಬಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.